## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

***ಸಿ.ಸಿ. ಸಂಖ್ಯೆ : 947/2021***

***ಚಾಸಾ : 3***

***ಪ್ರಾಸಾ : 3***

| | | |
|---|---|---|
| **ಹೆಸರು** | : | ಸಿ ಎಕ್ಸ್ ಜಾರ್ಜ್ |
| **ತಂದೆಯ ಹೆಸರು** | : | ಜೇವಿಯರ್ |
| **ವಯಸ್ಸು** | : | 35 ವರ್ಷ |
| **ಉದ್ಯೋಗ** | : | ಖಾಸಗಿ ನೌಕರ |
| **ವಾಸಸ್ಥಳ** | : | ಬಾಡಗ ಬಾಣಾಂಗಾಲ, ಸಿದ್ದಾಪುರ |

**ದಿನಾಂಕ : *05-10-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

***ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ.***

ಚಾಸಾ-1 ನನ್ನ ತಂದೆ. ಚಾಸಾ-2 ನನ್ನ ಅಣ್ಣ. ಚಾಸಾ-4 ಹಾಗೂ 5 ರವರ ಪರಿಚಯವಿರುತ್ತದೆ. ನಾವು ದಿನಲೂ ನಮ್ಮ ಹಸವನ್ನು ಮೇಯಲು ಬಿಡುತ್ತಿದ್ದು, ಅದರಂತೆ ದಿನರಾಕ 12-05-2021 ರಂದು ಹಸುವನ್ನು ಮೇಯಲು ಗದ್ದೆಗೆ ಬಿಟ್ಟಿದ್ದು, ಮಾಮುಲಾಗಿ ಅದು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಅದು ಮನೆಗೆ ಹಿಂತಿರುಗಿತ್ತಿದ್ದು, ಆದರೆ ಸದರಿ ದಿನದಂದು ಅದು ಬಂದಿರುವುದಿಲ್ಲ. ಆ ಕಾರಣ ಮರುದಿನ ಬೆಳಿಗ್ಗೆ ನಾನು, ನನ್ನ ತಂದೆಯಾದ ಚಾಸಾ-1 ಹಾಗೂ ನನ್ನ ಅಣ್ಣನಾದ ಚಾಸಾ-2 ರವರು ಅದನ್ನು ಹುಡುಕಿಕೊಂಡು ಹೋಗಿದ್ದು, ನಮ್ಮ ಮನೆಯ ಪಕ್ಕದಲ್ಲಿದ್ದ ಬಿಬಿಟಿಸಿ ಕಂಪನಿಗೆ ಸೇರಿದ ತೋಟದ ಹತ್ತಿರ ಹೋದಾಗ ಅಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿರುತ್ತದೆ. ನಂತರ ನಾವು ಮುಂದೆ ಹೋಗಿ ನೋಡಲಾಗಿ, ಅಲ್ಲಿ ನಮ್ಮ ಹಸುವಿನ ಚರ್ಮ ಹಾಗೂ ಕರಳು ಇರುವುದು ಕಂಡು ಬಂದಿರುತ್ತದೆ. ನಂತರ ನಾವು ಪೋಲಿಸರಿಗೆ ದೂರನ್ನು ನೀಡಿದ್ದು, ನಂತರ ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲಿಸಿ, ಅಲ್ಲಿ ಮಹಜರ ಕ್ರಮ ಜರುಗಿಸಿ, ನಂತರ ಅಲ್ಲಿ ಸಿಕ್ಕಿದ ಹಸುವಿನ ಚರ್ಮ ಹಾಗೂ ಕರುಳನ್ನು ಅಲ್ಲಿಯೇ ಹೂತು ಹಾಕಲಾಯಿತು. ಪೋಲಿಸರು ನನ್ನ ಅಣ್ಣನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 13 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1, 3 ಹಾಗೂ 4 ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ. 2 ಹಾಗೂ *5* ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. *2*

ಹಾಗೂ *5* ನೇ ಆರೋಪಿಗಳು ಗೈರು ಹಾಜರಾಗಿದ್ದು, ಆರೋಪಿಗಳ ಪರ ವಕೀಲರು ಅವರುಗಳ ಹಾಜರಾತಿ ವಿನಾಯಿತಿಯನ್ನು ಅರ್ಜಿ ಸಲ್ಲಿಸಿದ್ದು ಸದರಿ ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಪಾಟಿ ಸವಾಲು : ಶ್ರೀ. ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ**

ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿಗಳು ನಮ್ಮ ಹಸವನ್ನು ಕರೆದುಕೊಂಡು ಹೋಗಿರುವುದನ್ನು ನಾವು ನೋಡಿರುವುದಿಲ್ಲ. ಬಿಬಿಟಿಸಿ ಕಂಪನಿಗೆ ಸೇರಿದ ಎಸ್ಟೇಟ್ ಸುಮಾರು ಎರಡು ಸಾವಿರ ಎಕರೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಎಸ್ಟೇಟ್ ಹಾಗೂ ನಮ್ಮ ಮನೆಯ ಅಕ್ಕಪಕ್ಕ ಕಾಡುಪ್ರಾಣಿಗಳ ಕಾಟ ಇರುತ್ತದೆ ಎಂದರೆ ಸರಿ. ನನಗೆ ಗೋಮಾಂಸ ತಿನ್ನುವ ಅಭ್ಯಾಸವಿರುತ್ತದೆ. ನಮ್ಮ ಹಸುವನ್ನು ಆರೋಪಿಗಳು ಕರೆದುಕೊಂಡು ಹೋಗಿ, ಯಾವುದೇ ಮಾಂಸ ಮಾಡಿರುವುದಿಲ್ಲ, ಬದಲಾಗಿ ಅದನ್ನು ಯಾವುದೋ ಕಾಡು ಪ್ರಾಣಿ ಕೊಂದು, ಕಳೆ ಬರಹ ಬಿಟ್ಟು ಹೋಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.

ಓ. ಹೇ. ಕೇ. ಸ. ಇದೆ. ಸಹಿ/-

(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.